ದಿನಾಂಕಃ 23-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 1 ರಿಂದ 3 ನೇ ಪ್ರತಿವಾದಿಗಳ ಪರವಾಗಿ ಶ್ರೀ. ವಿ.ಆರ್.ಆರ್. ವಕೀಲರಿಂದಃ-**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರು ಸರ್ವೆ ನಂಬರ್ 126 ರ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆ ಜಮೀನು ಶೆಟ್ಟೀಹಳ್ಳಿ ಗ್ರಾಮಕ್ಕೆ ಸೇರಿದ ಜಮೀನಾಗಿರುತ್ತದೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಅದರ ವಿಸ್ತೀರ್ಣ 5 ಎಕರೆ 20 ಗುಂಟೆ ಆಗಿರುತ್ತದೆ. ಆ ಜಮೀನಿನ ಚೆಕ್ಕುಬಂಧಿ ಪೂಃ ಈರಣ್ಣನವರ ಜಮೀನು, ಪಃ ವೀರನಹಳ್ಳಿ ಗಡಿ, ಉಃ ಸರ್ಕಾರಿ ಗುಟ್ಟೆ ಮತ್ತು ದಃ ಚಿಕ್ಕಕರಿಯಪ್ಪನ ಜಮೀನು. ಈ ಚೆಕ್ಕುಬಂಧಿಯಲ್ಲಿರುವ ಜಮೀನು ಸರ್ವೆ ನಂಬರ್ 126 ರ ಜಮೀನಾಗಿರುತ್ತದೆ. ಸರ್ವೆ ನಂಬರ್ 126 ರ ಜಮೀನಿನ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಜಮೀನು ಇದೆ. ನನ್ನ ಜಮೀನಿನ್ನು ಕೆರೆಗೆ ಸ್ವಾಧೀನಪಡಿಸಿಕೊಂಡು ಸುಮಾರು 20 ವರ್ಷಗಳಾಗಿರುತ್ತವೆ. ಕಳೆದ 20 ವರ್ಷಗಳಿಂದ ನಾನು ಆ ಜಮೀನಿನಲ್ಲಿ ಸ್ವಾಧೀನಾನುಭವ ಹೊಂದಿರುವುದಿಲ್ಲ ಬದಲಾಗಿ ಸರ್ಕಾರಿ ಕೆರೆ ಇದೆ. ನಾನು ಈ ಮೇಲೆ ಹೇಳಲಾದ ಚೆಕ್ಕುಬಂಧಿ ಸರ್ವೆ ನಂಬರ್ 129 ರ ಜಮೀನಿಗೆ ಸೇರಿದ ಚೆಕ್ಕುಬಂಧಿ ಎಂದರೆ ಸರಿಯಲ್ಲ. ನಾನು ಹೇಳಿದ ಚೆಕ್ಕುಬಂಧಿಯಲ್ಲಿ ಸರ್ವೆ ನಂಬರ್ 126 ರ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 126 ರ ಜಮೀನಿನ ಚೆಕ್ಕುಬಂಧಿ, ಪೂಃ

ಈರಮರಿಯಪ್ಪನ ಜಮೀನು, ಪಃ ಕರೆಂಟ್ ಈರಣ್ಣನವರ ಜಮೀನು, ಉಃ ಮುದ್ದಕ್ಕ ಮತ್ತು ಸಣ್ಣೀರಮ್ಮನ ಜಮೀನು ದಃ ಭದ್ರಣ್ಣನ ಜಮೀನು ಎಂದರೆ ಸಾಕ್ಷಿಯು ಈ ಜಮೀನು ಪ್ರತಿವಾದಿಗೆ ಸೇರಿದ ಜಮೀನಾಗಿರುತ್ತದೆ ಎಂದ ಸ್ವತಃ ನುಡಿಯುತ್ತಾರೆ. ಈ ಮೇಲೆ ಚೆಕ್ಕುಬಂಧಿ  ಸರ್ವೆ ನಂಬರ್ 126 ರ ಜಮೀನಿನ ಚೆಕ್ಕುಬಂಧಿ ಎಂದರೆ ಸರಿಯಲ್ಲ.

ಮಾಡಗಾನಹಟ್ಟಿಯ ಈರಣ್ಣನ ಮಗ ಈರಮಲ್ಲಣ್ಣ, ಈರಣ್ಣನ ಮಕ್ಕಳಾದ ಚಿಕ್ಕೀರಪ್ಪ, ಕುಮಾರಣ್ಣ ಮತ್ತು ನಾಗಣ್ಣನವರು ನನಗೆ ಗೊತ್ತು. ಇವರುಗಳು ಆ ಜಮೀನನ್ನು ಚಿಕ್ಕಣ್ಣನ ಹೆಂಡತಿ ರಂಗಮ್ಮನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಮಾರಾಟ ಮಾಡಿದ ದಿನದಿಂದ ಆ ಜಮೀನಿನಲ್ಲಿ ರಂಗಮ್ಮ ಮತ್ತು ಈರಮ್ಮನವರೇ ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿ. ಆ ಕ್ರಯ ಪತ್ರದಂತೆ ಆ ಜಮೀನು ರಂಗಮ್ಮ ಮತ್ತು ಈರಮ್ಮನವರ ಹೆಸರಿಗೆ ಕಂದಾಯ ದಾಖಲೆಗಳು ಆದವು ಎಂದರೆ ಸರಿ. ರಂಗಮ್ಮ ಮತ್ತು ಈರಮ್ಮನವರು ಮೃತಪಟ್ಟ ನಂತರ ದಾವಾ ಆಸ್ತಿಯ ದಾಖಲೆಗಳು ಪ್ರತಿವಾದಿಯರ ಹೆಸರಿಗೆ ವರ್ಗಾವಣೆ ಆಗಿರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಪಹಣಿ ಮತ್ತು ಎಂ.ಆರ್.ಗಳನ್ನು ನಾನು ನೋಡಿರುತ್ತೇನೆ. ಆ ಕಂದಾಯ ದಾಖಲೆಗಳನ್ನು ಸರ್ವೆ ನಂಬರ್ 126  ಎಂದು ನಮೂದಾಗಿದೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ಪಟೇಲರಾಗಿದ್ದ ಸಮಯದಲ್ಲಿ ವಾದಿಯ ಕಡೆಯಿಂದ ಕಂದಾಯ ವಸೂಲಿ ಮಾಡಿದ ಕಾರಣ

ದಾವಾ ಆಸ್ತಿಯ ಸರ್ವೆ ನಂಬರ್ 126 ಎಂದು ನುಡಿಯುತ್ತಿದ್ದೇನೆ. ದಾವಾ ಆಸ್ತಿ ಪ್ರತಿವಾದಿಯವರ ತಾಯಿ ಕ್ರಯಕ್ಕೆ ಪಡೆದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ ದಾವಾ ಆಸ್ತಿಯ ಎಲ್ಲಾ ಕಂದಾಯ ಇಲಾಖೆಯ ದಾಖಲೆಗಳು ಪ್ರತಿವಾದಿಯರ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ಯಾವುದೇ ವ್ಯಕ್ತಿ ಒಂದು ಆಸ್ತಿಯ ಸ್ವಾಧೀನಾನುಭವದಲ್ಲಿದ್ದರೆ ಪಹಣಿ ಪತ್ರಿಕೆಯ ಕಲಂ ನಂಬರ್ 12(2) ರಲ್ಲಿ ಆ ವ್ಯಕ್ತಿಯ ಹೆಸರೇ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಯ ಕಲಂ ನಂಬರ್ 9 ಮತ್ತು 12 ರಲ್ಲಿ ವಾದಿಯ ಹೆಸರೇ ಬರುತ್ತಿದೆ.

ಸರ್ವೆ ನಂಬರ್ 129 ರ ಜಮೀನನ್ನು ವಾದಿ ಚಂದ್ರಗಿರಿಯ ಹನಮಂತಯ್ಯನ ಮಗ ಜೂಲಪ್ಪನವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಚಂದ್ರಗಿರಿ ರಂಗಪ್ಪನವರು 1 ನೇ ವಾದಿಯ ಮಾವ. ಸರ್ವೆ ನಂಬರ್ 59/5 ರ ಜಮೀನನ್ನು ವಾದಿ ಹನುಮಂತಯ್ಯನ ಮಗ ಜೂಲಪ್ಪನವರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 126(ದಾವಾ 'ಎ' ಷೆಡ್ಯೂಲ್ ಆಸ್ತಿ) ಮತ್ತು 59/5 ರ ಜಮೀನುಗಳ ಚೆಕ್ಕುಬಂಧಿ ಒಂದೇ ಆಗಿರುತ್ತವೆ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಮಾವ ಖರೀದಿಸಿದ ಜಮೀನು ಸರ್ವೆ ನಂಬರ್ 129 ಮತ್ತು 59/5 ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 59/5 ರ ಜಮೀನು ಪೊಡಾಗಿ ಸರ್ವೆ ನಂಬರ್ 59/3 ಆಯಿತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 59/3 ರ ಜಮೀನನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡು

ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ ವಾದಿ ಆ ಆಸ್ತಿಯ ಸ್ವಾಧೀನಾನುಭವ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯರು ವಿಶ್ವಾಸಿಗರು. ಆ ಕಾರಣ ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 4 ನೇ ಪ್ರತಿವಾದಿ ಪರ ಯಾರೂ ಪ್ರತಿನಿಧಿಸದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ